ವ್ಯಾಖ್ಯಾನ

# ರಂಗನಾಯಕ ರಾಜೀವಲೋಚನ

ರಂಗನಾಯಕ ರಾಜೀವಲೋಚನ
ರಮಣನೆ ಬೆಳಗಾಯಿತು ಏಳೆನ್ನುತ || ಪ ||

ಅಂಗನೆ ಲಕುಮಿ ತಾ ಪತಿಯನೆಬ್ಬಿಸಿದಳು
ಶೃಂಗಾರದ ನಿದ್ದೆ ಸಾಕೆನ್ನುತ || ಅಪ ||

ಪಕ್ಷಿರಾಜನು ಬಂದು ಬಾಗಿಲಲ್ಲಿ ನಿಂದು
ಅಕ್ಷಿ ತೆರೆದು ಬೇಗ ಈಕ್ಷಿಸೆಂದು
ಪಕ್ಷಿಜಾತಿಗಳೆಲ್ಲ ಚಿಲಿಪಿಲಿಗುಟ್ಟುತ್ತ
ಸೂಕ್ಷ್ಮದಲಿ ನಿನ್ನ ಸ್ಮರಿಸುವವೋ ಕೃಷ್ಣ || ೧ ||

ಸನಕ ಸನಂದನ ಸನತ್ಸುಜಾತರು ಬಂದು
ವಿನಯದಿಂ ಕರ ಮುಗಿದು ಓಲೈಪರು
ಘನ ಶುಕ ಶೌನಕ ವ್ಯಾಸ ವಾಲ್ಮೀಕರು
ನೆನೆದು ನೆನೆದು ಕೊಂಡಾಡುವರು ಹರಿಯೇ || ೨ ||

ಸುರರು ಕಿನ್ನರರು ಕಿಂಪುರುಷರು ಉರಗರು
ಪರಿಪರಿಯಲಿ ನಿನ್ನ ಸ್ಮರಿಸುವರು
ಅರುಣನು ಬಂದು ಉದಯಾಚಲದಲಿ ನಿಂದು
ಕಿರಣ ತೋರುವನು ಭಾಸ್ಕರನು ಶ್ರೀಹರಿಯೆ || ೩ ||

ಪದುಮನಾಭನೆ ನಿನ್ನ ನಾಮಾಮೃತವನ್ನು
ಪದುಮಾಕ್ಷಿಯರು ತಮ್ಮ ಗೃಹದೊಳಗೆ
ಉದಯದೊಳೆದ್ದು ಸವಿದಾಡುತ್ತ ಪಾಡುತ್ತ
ದಧಿಯ ಕಡೆವರೇಳೋ ಮಧುಸೂದನ ಕೃಷ್ಣ || ೪ ||

ಮುರಮಥನನೆ ನಿನ್ನ ಚರಣದ ಸೇವೆಯ

**ಕರುಣಿಸಬೇಕೆಂದು ತರುಣಿಯರು**
**ಪರಿಪರಿಯಿಂದಲೆ ಸ್ಮರಿಸಿ ಹಾರೈಪರು**
**ಪುರಂದರವಿಠಲ ನೀನೇಳೋ ಶ್ರೀಹರಿಯೆ || ೫ ||**

**ಬೆಳಗು --**
**ರಂಗನಾಯಕ ರಾಜೀವಲೋಚನ**
**ರಮಣನೆ ಬೆಳಗಾಯಿತು ಏಳೆನ್ನುತ**
**ಅಂಗನೆ ಲಕುಮಿ ತಾ ಪತಿಯನೆಬ್ಬಿಸಿದಳು**
**ಶೃಂಗಾರದ ನಿದ್ರೆ ಸಾಕೆನ್ನುತ || ಪ ||**

ಜಗತ್ತಿನ ತಾಯಿ ಲಕ್ಷ್ಮೀ. ರಾಜೀವನ ರಾಣಿ. ತನ್ನ ರಮಣನನ್ನು ಎಬ್ಬಿಸುತ್ತಾಳೆ.
ಅತಿ ಪ್ರೀತಿಯಿಂದ. ಬೆಳಗಾಯಿತು ಬ್ರಹ್ಮಾಂಡ ನಾಯಕನೇ. ಏಳು ಸ್ವಾಮಿ.
ನಿದ್ರೆ ನಿನಗಿಲ್ಲ. ಮಲಗುವವ ನೀನಲ್ಲ. ಯೊಗ ನಿದ್ರೆ ಸಾಕು. ಕಪಟ ನಾಟಕ ಬೇಡ.
ಆತ ರಂಗನಾಯಕ ಯಾಕೆ?

ಬ್ರಹ್ಮಾಂಡವೇ ಬ್ರಹದ್ ರಂಗಮಂಚ. ಪರಬ್ರಹ್ಮನೇ ನಟ. ನಾಯಕ ನಟ. ಸೂತ್ರಧಾರಿ.
ಜಗದೋದ್ಧಾರಕ. ಕರುಣಾ ಸಾಗರ. ಪರಮಾತ್ಮನಿಗೆ ಎಲ್ಲಿಯ ಬೆಳಗು, ಸಂಜೆ, ರಾತ್ರಿ?
ಜ್ಞಾನಮಯನಾತ. ಬೆಳಕಿನ ಸೆಲೆ.
ಬೆಳಗಾಯಿತು ಏಳು ಎಂಬ ಲಕ್ಷ್ಮೀ ಮಾತು ಸೂಚಿಸುತ್ತದೆ ಹೀಗೆ -
ಬೆಳಕು, ಹಗಲು, ಸೃಷ್ಟಿಯ ಸಂಕೇತ. ಚಟುವಟಿಕೆ ಭರಿತ.
ರಾತ್ರಿ ಲಯದ ಸಂಕೇತ. ಬ್ರಹ್ಮಮಾನದಿಂದ ನೂರುವರ್ಷ ಪ್ರಲಯ ಕಾಲ. ಅದು ರಾತ್ರಿ.
ಪರಮಾತ್ಮನ ಯೋಗನಿದ್ರೆ. ಎಂಬತ್ತೇಳೂವರೆ ವರ್ಷ ಕಳೆಯಿತು. ಹನ್ನೆರಡೂವರೆ ವರ್ಷ ಉಳಿಯಿತು.
ಇದು ರಾತ್ರಿಯ ಕೊನೆ. ಬೆಳಗಿನ ಆರಂಭ. ಪ್ರಲಯದ ಅಂತ್ಯ. ಸೃಷ್ಟಿಯ ಆರಂಭ.
ಅದಕ್ಕಾಗಿ ಎಲ್ಲೆಡೆ ಉದಿಸುವ ನಸುಕಿನ ಲಕ್ಷಣಗಳನ್ನು ಸ್ಮರಿಸಿದ್ದಾರೆ ದಾಸರು.

**'ಬ್ರಹ್ಮಾಂಡ ಸೃಷ್ಟಿ. ಜೀವರಿಗೆ ಸ್ಥೂಲ ದೇಹ ಸಂಪರ್ಕ. ಅವರ ಸಾಧನೆ. ಸದ್ಗತಿ.**
**ಇಷ್ಟೆಲ್ಲ ಕೆಲಸ ಉಂಟು. ವರದೋನ್ಮುಖನಾಗು.'**

ಲಕ್ಷ್ಮೀ ಪ್ರಾರ್ಥನೆ. ಅವಳು ತಾಯಿಯಲ್ಲವೇ? ಮಕ್ಕಳ ಮೇಲೆ ಹೆಚ್ಚಿನ ಮಮತೆ ಮತ್ತೆ ಕರುಣೆ.

**ಪಕ್ಷಿರಾಜನು ಬಂದು ಬಾಗಿಲಲ್ಲಿ ನಿಂದು,**
**ಅಕ್ಷಿ ತೆರೆದು ಬೇಗ ಈಕ್ಷಿಸೆಂದು**

**ಪಕ್ಷಿಜಾತಿಗಳೆಲ್ಲ ಚಿಲಿಪಿಲಿಗುಟ್ಟುತ್ತ,**
**ಸೂಕ್ಷ್ಮದಲಿ ನಿನ್ನ ಸ್ಮರಿಸುವವೋ ಕೃಷ್ಣ || ೧ ||**

ಸ್ವಾಮಿ ನಿನ್ನೆದರು ಪಕ್ಷಿರಾಜ - ಗರುಡ ಬಂದಿದ್ದಾನೆ. ಏನಪ್ಪಣೆ? ಕೈ ಮುಗಿದು ನಿಂತಿದ್ದಾನೆ.
ಹಾರಾಡುವ ಗರುಡ ಹಾರಿಹೋಗುವ ಕಾಲದ ಪ್ರತೀಕ. ಮತ್ತೆ ಕಾಲಾಭಿಮಾನಿಯೂ ಹೌದು.
ಅರ್ಥಾತ್ ಕಾಲ ಕೈ ಮುಗಿದು ನಿಂತಿದ್ದಾನೆ.
ಇವರೆಲ್ಲರ ಮೇಲಿನವ 'ಪರೋವರೀಯಾನ್' ಪರಮಾತ್ಮ. ಕಾಲನಾಮಕ. ನಿಯಾಮಕ, ಕಾಲಂತರ್ಯಾಮಿ ಕಾಲ ಪ್ರವರ್ತಕ.

ಚಿಲಿಪಿಲಿಗುಟ್ಟುವ ಹಕ್ಕಿಗಳು, ಹರಿಸ್ಮರಣೆಯ ಸುಪ್ರಭಾತ, ಎಲ್ಲ ಶುಭ ಮುಂಜಾವಿನ ಸಂಕೇತ.

**ಸನಕ ಸನಂದನ ಸನತ್ಸುಜಾತರು ಬಂದು**
**ವಿನಯದಿಂ ಕರ ಮುಗಿದು ಒಲೈಪರು**
**ಘನ ಶುಕ ಶೌನಕ ವ್ಯಾಸವಾಲ್ಮೀಕರು**
**ನೆನೆದು ನೆನೆದು ಕೊಂಡಾಡುವರು ಹರಿಯೇ || ೨ ||**

ಸನಕ, ಸನಂದನ, ಸನತ್ ಸುಜಾತರು ಬಂದಿದ್ದಾರೆ. ಕೈಮುಗಿದು ವಂದಿಸುತ್ತಾರೆ.
ಶೌನಕ, ವಾಲ್ಮೀಕಿ ಆದಿ ಋಷಿಗಳು ನಿನ್ನನ್ನು ಸ್ಮರಿಸುತ್ತಾರೆ. ಕೊಂಡಾಡುತ್ತಾರೆ.

**ಸುರರು ಕಿನ್ನರರು ಕಿಂಪುರುಷರು ಉರಗರು**
**ಪರಿಪರಿಯಲಿ ನಿನ್ನ ಸ್ಮರಿಸುವರು**
**ಅರುಣನು ಬಂದು ಉದಯಾಚಲದಲಿ ನಿಂದು**
**ಕಿರಣ ತೋರುವನು ಭಾಸ್ಕರನು ಶ್ರೀಹರಿಯೆ || ೩ ||**

ಅರುಣೋದಯವಾಗಿದೆ. ಉದಯಾಚಲದ ಅಂಚಿನಲಿ ಭಾನುವಿನ ಹೊಂಬಣ್ಣದ ಕಿರಣಗಳು ಹೊರ ಹೊಮ್ಮುತ್ತಿವೆ. ಶುಭ್ರ ಬೆಳಗು. ಸುರರು, ಗಂಧರ್ವರು, ಕಿನ್ನರರಾದಿ ಮುಂಜಾವಿನ ಪ್ರಾರ್ಥನೆ ಮಾಡುತ್ತಿದ್ದಾರೆ. ಇಂಪಾದ ದನಿಯಲ್ಲಿ ಹಾಡಿ ಸ್ತುತಿಸುತ್ತಿದ್ದಾರೆ.
ಇವೆಲ್ಲ ಪ್ರಭಾತದ ಪ್ರತೀಕ. ಇವರಾರೂ ಪ್ರಳಯ ಕಾಲದಲಿ ಇಲ್ಲ.
ಮುಂಜಾವು ಸೃಷ್ಟಿ ಆರಂಭದ ಸೂಚಕವಷ್ಟೇ.
**'ನಾರಾಯಣ ಇದಮಗ್ರೇ ಆಸೀತ'**
ಲಕ್ಷ್ಮೀ ಸಹಿತ ನಾರಾಯಣನೊಬ್ಬನೇ ಇದ್ದ. ಪ್ರಾರ್ಥಿಸುವವಳು ನಿತ್ಯಾವಿಯೋಗಿನಿ ಲಕ್ಷ್ಮೀಯೇ.

ಸುರರು, ಗಂಧರ್ವರು, ಕಿನ್ನರರು, ಋಷಿ ಮುನಿಗಳಾದಿ ಎಂದು ಹೇಳುವಲ್ಲಿ ಸೃಷ್ಟಿಯ ತಾರತಮ್ಯ ಸೂಚ್ಯವಿದೆ.
ವಾಲ್ಮೀಕಿ ಮಹಾಮುನಿಗಳಿಂದ ರಾಮಾಯಣ. ಸೃಷ್ಟಿಯಾಗ ಬೇಕು.

ತ್ರೇತೆ ಬರಬೇಕು. ನೀ ಪುರುಷೋತ್ತಮ ರಾಮನಾಗ ಬೇಕು. ರಾಮರಾಜ್ಯ ಮೆರೆಯ ಬೇಕು.
ವಾಲ್ಮೀಕಿ ಬಯಕೆ.
ಅಂತೆಯೇ ವ್ಯಾಸ ಮಹರ್ಷಿಗಳು -
ದ್ವಾಪರದ ಕೊನೆ. ಶ್ರೀ ಕೃಷ್ಣನ ಅವತಾರ. ದುಷ್ಟ ಕೌರವರ ಅಂತ್ಯ. ಶಿಷ್ಟ ಪಾಂಡವರ ಉತ್ಥಾನ.
ಜಗಕೆ ಭಗವದ್ಗೀತೆ. ಇಂತೆಲ್ಲ ನಡೆಯ ಬೇಕು.
ಕಾರ್ಯೋನ್ಮುಖನಾಗು ಸ್ವಾಮಿ. ಶ್ರೀ ರಮಣಿಯ ಸ್ತುತಿ ಪ್ರಾರ್ಥನೆ.

**ಪದುಮನಾಭನೆ ನಿನ್ನ ನಾಮಾಮೃತವನ್ನು ಪ**
**ದುಮಾಕ್ಷಿಯರು ತಮ್ಮ ಗೃಹದೊಳಗೆ**
**ಉದಯದೊಳೆದ್ದು ಸವಿದಾಡುತ್ತ ಪಾಡುತ್ತ**
**ದಧಿಯ ಕಡೆವರೇಳೋ ಮಧುಸೂದನ ಕೃಷ್ಣ || ೪ ||**

ಪದುಮನಾಭನೇ = ಹರಿ ಬ್ರಹ್ಮಾಂಡ ಸೃಷ್ಟಿಸಿದ. ಗರ್ಭೋದಕದಲಿ ಮಲಗಿದ. ಆತನ ನಾಭಿಯಿಂದ ಪದುಮ - ಕಮಲ ಹುಟ್ಟಿತು. ಅದರಲ್ಲಿ ಚತುರ್ಮುಖ ಬ್ರಹ್ಮ ಜನಿಸಿದ.
ವಿಷ್ಣು ಪದ್ಮನಾಭನಾದ. ಲಕ್ಷ್ಮೀ ಪದುಮಾಕ್ಷಿ. ಬ್ರಹ್ಮ ಕಮಲಾಸನನಾದ.
ವಿಷ್ಣುವಿನ ಪ್ರೇರಣೆ. ಹದಿನಾಲ್ಕು ಲೋಕಗಳ ಸೃಷ್ಟಿ ಬ್ರಹ್ಮನಿಂದಾಯಿತು.
ಹೀಗೆ ಪದುಮನಾಭನ ಸ್ಮರಣೆ. ಸೃಷ್ಟಿ ಚಿಂತನ. ದಾಸವರೇಣ್ಯರ ಇಚ್ಛೆ.
ಗೋಪಿಯರ ಸವಿ ದನಿಯ ಹಾಡು - ಪಾಡು - ನಲಿವು ಬೆಳಗಿನ ಸಂಕೇತ. ಕೃಷ್ಣಾವತಾರಕ್ಕೆ ಬಯಕೆ.
ದಧಿಯ ಕಡೆವರು ಎಂದರು. ಏಳು ಸ್ವಾಮಿ, ಕೂರ್ಮಾವತಾರ ತಾಳಲು ಬೇಕು. ಮಂದರಗಿರಿ ಧರಿಸ ಬೇಕು. ಸಮುದ್ರ ಮಂಥನ ಮಾಡಬೇಕು. ನಿನ್ನ ಸರ್ವೋತ್ತಮತೆ ನಾ ಸಾರಲು ಬೇಕು.
ನಿನ್ನ ಕೊರಳಿಗೆ ವರಮಾಲೆ ನಾ ಹಾಕಬೇಕು.

**ಮುರಮಥನನೆ ನಿನ್ನ ಚರಣದ ಸೇವೆಯ**
**ಕರುಣಿಸಬೇಕೆಂದು ತರುಣಿಯರು**
**ಪರಿಪರಿಯಿಂದಲೆ ಸ್ಮರಿಸಿ ಹಾರೈಪರು**
**ಪುರಂದರವಿಠಲ ನೀನೇಳೋ ಶ್ರೀಹರಿಯೆ || ೫ ||**

ದೈತ್ಯ ಮುರನ ಸಂಹಾರ ಮಾಡಿದೆ - ನೀ ಮುರಾರಿ. ಮಾವ ದುಷ್ಟ ಕಂಸನ ಸಂಹಾರ, ನೀ ಕಂಸಾರಿ.

ಮಧು ದೈತ್ಯನ ಮರ್ದನ ನೀ ಮಧುಸೂಧನ. ನರಕಾಸುರ ಸಂಹಾರ.

ಹದಿನಾರುಸಾವಿರ ತರುಣಿಯರ ರಕ್ಷಣೆ. ಅವರಲ್ಲಿ ನಾನಿದ್ದು ನಿನ್ನ ಮದುವೆ ಮಾಡಬೇಕು. ಇಂತೆಲ್ಲ ಬಹಳುಂಟು. ಬೇಗ ಏಳು ಸ್ವಾಮಿ. ಹೀಗೆ ಲಕ್ಷಣತಯಾ --

ದಶಾವತಾರ ಮಾಡಲುಬೇಕು. ಇಪ್ಪತ್ತು ನಾಲ್ಕು ರೂಪ. ನೂರು ರೂಪ. ಸಹಸ್ರ ಸಹಸ್ರ ರೂಪ ತಾಳಲು ಬೇಕು. ಜಗವ ಪೊರೆಯಲು ಬೇಕು.

ಇಂತು ಇಂಥ ಬೆಳಗಾಯಿತು. ಸೃಷ್ಟಿ ಪ್ರಾರಂಭವಾಗ ಬೇಕು. ಜೀವರ ಸಾಧನೆಯಾಗ ಬೇಕು. ಸದ್ಗತಿ ದೊರೆಯ ಬೇಕು. ಅದಕಾಗಿ ಏಳು ಸ್ವಾಮಿ

ಎಂದು ಅಂಗನೆ ತನ್ನ ರಮಣನನ್ನು ಎಬ್ಬಿಸುವ ನಾಟಕ ಮಾಡಿದಳು.

ದಾಸವರೇಣ್ಯ ಪುರಂದರದಾಸರ ಮಾತು. ಕೇಳಬೇಕೇ? ಹತ್ತಾರು ಅರ್ಥ ಹುದುಗಿರುತ್ತದೆ. ಹೀಗೆ ಸೃಷ್ಟಿ ಚಿಂತನೆ ಒಳಗೆ ಅಡಗಿಸಿದ್ದಾರೆ. ಮೇಲೆ ಉದಯರಾಗ. ಹರಿ ಮಹಿಮೆ ಸ್ಮರಣೆಯ ಕವಚ.

ಸುಮಧುರ ದೇವರನಾಮ. ದಾಸರ, ಮುಖ್ಯ ಪ್ರಾಣರ ಅಂತರ್ಯಾಮಿ ಜಗದೊಡೆಯ ರುಕ್ಮಿಣಿ ಸಹಿತ ವಿಠ್ಠಲನಿಗೆ ಸಾಸಿರ ದಂಡ ನಮನಗಳು

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ , ಧಾರವಾಡ